**ಪ್ರಧಾನ  ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

ಪ್ರಧಾನ ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರ. ದ. ನ್ಯಾ.ದಂ.

**ಅಸಲು ದಾವಾ ಸಂಖ್ಯೆ. 120/2024**

**ದಿನಾಂಕಃ 31ನೇ  ಜನವರಿ 2025**

**ವಾದಿ/ಅರ್ಜಿದಾರರುಃ** ರಾಜಮ್ಮ ಮತ್ತು ಇತರರು

**(ವಾದಿ ಪರ ಶ್ರೀ ಆರ್. ರಾಮಕೃಷ್ಣ, ವಕೀಲರು)**

**ವಿರುದ್ಧ**

**ಪ್ರತಿವಾದಿ/ಎದುರುದಾರರುಃ** ರತ್ನಕಲಾ

**( ಪ್ರತಿವಾದಿ ಪರ ಶ್ರೀ ಎಸ್. ಶಶಿಬಿಂಬ, ವಕೀಲರು)**

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ  XXXIX ನಿಯಮ 1 ಮತ್ತು 2 ಹಾಗೂ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ತಾತ್ಕಾಲಿಕ ತಡೆಯಾಜ್ಞೆಯನ್ನು ಕೋರಿ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***08.03.2024*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | **ಮಧ್ಯಂತರ ಅರ್ಜಿ ಸಂಖ್ಯೆ: 1** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***25.02.2025*** |

## ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ

ಅರ್ಜಿದಾರರು/ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಅದರಲ್ಲಿ ವಾದಿಯರ ಸ್ವಾಧೀನಾನುಭವದಲ್ಲಿರುವ ದಾವಾ ಷೆಡ್ಯೂಲ್ ಸ್ವತ್ತಿಗೆ ಪ್ರತಿವಾದಿಗಳಾಗಲಿ, ಅವರ ಪ್ರತಿನಿಧಿಗಳಾಗಲಿ ಅತಿಕ್ರಮ ಪ್ರವೇಶವನ್ನುಂಟು ಮಾಡಿ ತೊಂದರೆಯನ್ನುಂಟು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ದಾವಾ ಇತ್ಯರ್ಥವಾಗುವವರೆಗೂ ಆದೇಶಿಸಬೇಕೆಂದು ಕೋರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅದರಂತೆ ಅರ್ಜಿದಾರರು ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ ಅದರಲ್ಲಿ ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು, ಹನೂರು ಪಟ್ಟಣ, ಹುಲ್ಲೇಪುರ ಗ್ರಾಮದ ಸರ್ವೆ ನಂ. 118/ಎ1ಬಿ ವಿಸ್ತೀರ್ಣ 1.50 ಸೆಂಟ್ ತಮ್ಮ ತಂದೆ ಶಿವಪ್ಪನವರಿಗೆ ಸರ್ಕಾರದ ಆದೇಶದ ಸಂಖ್ಯೆ ಎ.ಸಿ.ಎಲ್.ಎನ್.ಡಿ 18/83-84 ರಂತೆ ಎಂಬುದಾಗಿ, ಅದರಂತೆ ಖಾತೆ, ಮ್ಯುಟೇಷನ್ ವರ್ಗಾವಣೆಗೊಂಡಿರುತ್ತದೆ. ತಮ್ಮ ತಂದೆಯವರು ಮರಣ ಹೊಂದಿದ್ದು, ವಾದಿಗಳಾದ ತಾವು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿರುತ್ತೇವೆ. ಹೀಗಿರುವಲ್ಲಿ ಪ್ರತಿವಾದಿಗಳು ಇತರೆಯವರ ಜೊತೆ ಶಾಮೀಲಾಗಿ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಅತಿಕ್ರಮ ಪ್ರವೇಶವನ್ನುಂಟು ಮಾಡಿ ತೊಂದರೆಯನ್ನುಂಟು ಮಾಡಲು ಪ್ರಯತ್ನಿಸುತ್ತಿರುತ್ತಾರೆ. ತಮ್ಮ ತಂದೆಯವರಾದ ಶಿವಪ್ಪನವರು ಮರಣ ಹೊಂದಿರುವುದರಿಂದ ಮರಣ ಪ್ರಮಾಣಪತ್ರವನ್ನು ಪಡೆದು

ಹನೂರು ತಾಲ್ಲೂಕು ತಹಶೀಲ್ದಾರ್ ರವರಿಗೆ ತಮ್ಮ ಹೆಸರಿಗೆ ಜಂಟಿ ಖಾತೆ ಮಾಡಿಕೊಡುವಂತೆ ಅರ್ಜಿಯನ್ನು ಸಲ್ಲಿಸಿದ್ದು, ಪ್ರತಿವಾದಿಗಳು ಅದಕ್ಕೆ ತಕರಾರನ್ನು ಸಲ್ಲಿಸಿದ್ದು, ಅಲ್ಲದೇ ದಾವಾ ಆಸ್ತಿಯನ್ನು ಸುಮಾರು ವರ್ಷಗಳ ಹಿಂದೆಯೇ ಕ್ರಯಪತ್ರದ ಮೂಲಕ ಖರೀದಿಸಿರುವುದಾಗಿ ಕ್ರಯಪತ್ರ ಸೃಷ್ಟಿಸಿಕೊಂಡಿರುತ್ತಾರೆ. ಅಲ್ಲದೇ ಅವರು ದಾವಾ ಆಸ್ತಿಯು ಎಲ್.ಎನ್.ಡಿ (5) 264/72-73 ರಂತೆ ದಿನಾಂಕಃ 14.02.1971 ರಂದು ನಾರಾಯಣಸ್ವಾಮಿ ಎಂಬುವವರಿಗೆ ಮಂಜೂರಾಗಿರುತ್ತದೆಂದು ತಿಳಿಸಿರುತ್ತಾರೆ. ಪ್ರತಿವಾದಿಗಳು ದಾಖಲಾತಿಗಳನ್ನು ಸೃಷ್ಟಸಿಕೊಂಡು ತಮ್ಮ ಸ್ವತ್ತನ್ನು ಕಬಳಿಸಲು ಪ್ರಯತ್ನಿಸುತ್ತಿರುತ್ತಾರೆ. ಪ್ರತಿವಾದಿಗಳು ವಾದಿಗಳಾದ ತಮ್ಮನ್ನು ದಾವಾ ಸ್ವತ್ತಿನಿಂದ ಹೊರ ಕಳಿಸಲು ಪ್ರಯತ್ನಿಸುತ್ತಿರುವ ಕಾರಣ ಮತ್ತು ತೊಂದರೆಯನ್ನು ನೀಡುತ್ತಿರುವುದಲ್ಲದೆ ಸೃಷ್ಟತ ದಾಖಲೆಯಂತೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಈ ಕಾರಣದಿಂದಾಗಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವುದಾಗಿ ಅದರಂತೆ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಅರ್ಜಿ ಪುರಸ್ಕರಿಸದಿದ್ದಲ್ಲಿ ತುಂಬಲಾರದ ಹೆಚ್ಚಿನ ಹಾನಿ ತಮಗೆ ಉಂಟಾಗುವುದಾಗಿ, ಅರ್ಜಿ ಪುರಸ್ಕರಿಸಿದಲ್ಲಿ ಪ್ರತಿವಾದಿಯರಿಗೆ ಯಾವುದೇ ಹಾನಿ/ನಷ್ಟವುಂಟಾಗುವುದಿಲ್ಲ. ಅದರಂತೆ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಅದರಂತೆ ಪ್ರತಿವಾದಿಗಳು ಮಧ್ಯಂತರ ಅರ್ಜಿ ಸಂಖ್ಯೆಃ 1ಕ್ಕೆ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ತಕರಾರೆಂದು ಪರಿಗಣಿಸುವಂತೆ ಕೋರಿ ಮೆಮೋ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಲಿಖಿತ ಹೇಳಿಕೆಯ ಅಂಶಗಳನ್ನು ಪರಿಶೀಲಿಸಲಾಗಿ, ಅದರಲ್ಲಿ ವಾದಿಗಳಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯಾದಂತಹ ಹಕ್ಕು, ಅಧಿಕಾರ, ಸ್ವಾಧೀನ ಇಲ್ಲದಿದ್ದಾಗ್ಯೂ ಸುಳ್ಳು ದಾಖಲೆಗಳ

ಆಧಾರದ ಮೇಲೆ ತಡೆಯಾಜ್ಞೆಯ ಆದೇಶವನ್ನು ಕೋರಿರುತ್ತಾರೆ. ಹನೂರು ತಾಲ್ಲೂಕು, ಹನೂರು ಹೋಬಳಿ, ಹುಲ್ಲೇಪುರ ಗ್ರಾಮದ ಸರ್ವೆ ನಂ. 118/ಎ1ಬಿ ವಿಸ್ತೀರ್ಣ 1.50 ಸೆಂಟ್ ಜಮೀನು ಸರ್ಕಾರಿ ಜಮೀನಾಗಿರುತ್ತದೆ. ಈ ಹಿಂದೆ ಸರ್ವೆ ನಂ. 118/ಎ1ಎ ಆಗಿದ್ದು, ಅದರಲ್ಲಿನ ವಿಸ್ತೀರ್ಣ 1.50 ಸೆಂಟ್ ಜಮೀನನ್ನು ಹನೂರು ಪಟ್ಟಣದ ವಿ. ನಾರಾಯಣಸ್ವಾಮಿ ಬಿನ್ ವೆಂಕಟರಮಣನಾಯ್ಡು ಎಂಬುವವರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದು, ಸಶಕಾರವು ಭೂನ್ಯಾಯ ಮಂಡಳಿಯನ್ನು ರಚಿಸಿದ ಮೇಲೆ ವಿ. ನಾರಾಯಣಸ್ವಾಮಿ ಅರ್ಜಿ ಸಲ್ಲಿಸಿದ ಮೇರೆಗೆ ಎಲ್.ಎನ್.ಡಿ (5) 264/72-73 ರಂತೆ ದಿನಾಂಕಃ 25.04.1973 ರಂದು ಗ್ರಾಂಟ್ ಸರ್ಟಿಪಿಕೇಟನ್ನು ನೀಡಲಾಗಿರುತ್ತದೆ. ಅದರಂತೆ ಎಂ.ಆರ್.13/84-85 ರಂತೆ ಖಾತೆಯಾಗಿದ್ದು, ವಿ. ನಾರಾಯಣಸ್ವಾಮಿ ಮರಣಾನಂತರದಲ್ಲಿ ಅವರ ಮಗನಾದ ಎನ್.ಜಯಚಂದ್ರ ಮತ್ತು ಇತರರ ಹೆಸರಿಗೆ ಫವತಿ ಖಾತೆಯಾಗಿರುತ್ತದೆ. ಸದರಿಯವರು 1ನೇ ಪ್ರತಿವಾದಿಯ ತಾಯಿ ಸರೋಜಮ್ಮ ಕೋಂ ಹೆಚ್.ಎಸ್. ಮಹದೇವಸ್ವಾಮಿ ರವರಿಗೆ ಹುಲ್ಲೇಪುರ ಸರ್ವೆ ನಂ. 118/ಎ1ಬಿ ರಲ್ಲಿ 1.50 ಸೆಂಟ್ ಮತ್ತು ಸರ್ವೆ ನಂ. 119/1 ರಲ್ಲಿ 1.49 ಸೆಂಟ್ ಒಟ್ಟು 2.99 ಸೆಂಟ್ ಜಮೀನನ್ನು ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು ಖಾತೆಯು ಎಂ.ಆರ್. 27/95-96 ರಂತೆ ಆಗಿರುತ್ತದೆ. ಕ್ರಯಪತ್ರದಲ್ಲಿ ಸರ್ವೆ ನಂ. 118/ಎ1ಎ ಮತ್ತು ಸರ್ವೆ ನಂ. 119 ಇದ್ದು ಸರ್ವೆ ನಂಬರ್ ಗಳು ಹಿಸ್ಸಾ ಸರ್ವೆ ಆಗಿ ಸರ್ವೆ ನಂಬರ್ 118/ಎ1ಬಿ ಮತ್ತು ಸರ್ವೆ ನಂ. 119/1 ಎಂದು ತಿದ್ದುಪಡಿಯಾಗಿದ್ದು ಆರ್.ಟಿ.ಸಿ ದಾಖಲೆಯಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ. ಸರ್ವೆ ನಂಬರ್ 118/ಎ1ಬಿ ರಲ್ಲಿ 1.50 ಸೆಂಟ್ ಪೈಕಿ 0.51 ಸೆಂಟ್ ಮತ್ತು ಸರ್ವೆ ನಂ. 119/1 ರಲ್ಲಿ 1.49 ಸೆಂಟ್ ಜಮೀನುಗಳು ದಿನಾಂಕಃ 08.05.1998 ರಂದು ಉಪವಿಭಾಗಾಧಿಕಾರಿಯವರಿಂದ

ನಂ.112/97-98 ರಂತೆ ಭೂಪರಿವರ್ತನೆಯಾಗಿ ಮಂಗಲ ಗ್ರಾಮ ಪಂಚಾಯಿತಿಗೆ ಒಳಪಟ್ಟಿರುವುದಾಗಿ ದಿನಾಂಕಃ 28.12.2020 ರಂದು ಮಂಗಲ ಗ್ರಾಮ ಪಂಚಾಯತಿ ಕಾರ್ಯದರ್ತಿಯವರು ದೃಢೀಕರಣ ಪತ್ರವನ್ನು ನೀಡಿ ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವುದರಿಂದ ತಮ್ಮ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. 1ನೇ ಪ್ರತಿವಾದಿಯ ತಾಯಿ ಈ ಹಿಂದೆಯೇ ಅಕ್ಕಿಗಿರಿಣಿ ಸ್ಥಾಪಿಸುವ ಸಂಬಂಧ ಅನ್ಯಕ್ರಾಂತ ಮಾಡಿಸಿಕೊಂಡಿರುತ್ತಾರೆ. 1ನೇ ಪ್ರತಿವಾದಿಯ ತಾಯಿ ಲೇಟ್ ಸರೋಜಮ್ಮ ಮರಣ ಹೊಂದಿದ್ದು 1ನೇ ಪ್ರತಿವಾದಿಯ ಹೆಸರಿಗೆ ವಾರಸು ಹಕ್ಕಿನ ಮೇರೆಗೆ ಐ.ಎನ್.ಹೆಚ್. 12/2002-03 ರಂತೆ ಖಾತೆ ಮಾಡುವ ಅವಧಿಯಲ್ಲಿ ಹನೂರು ಗ್ರಾಮ ಲೆಕ್ಕಿಗರು ಸರ್ವೆ ನಂ. 118/ಎ1ಬಿ ಬದಲಾಗಿ ಸರ್ವೆ ನಂ. 118/ಎ1ಎ ಎಂದು ತಪ್ಪಾಗಿ ನಮುದಾಗಿರುವುದನ್ನು ದುರುಪಯೋಗಪಡಿಸಿಕೊಂಡು ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕರಾಗಿರುವುದಾಗಿಂದ ಭೂ ಸ್ವಾಧೀನದ ಪರಿಹಾರದ ಹಣವನ್ನು ಪಡೆಯಲು ಅರ್ಹರಾಗಿರುತ್ತಾರೆ. ಉಪವಿಭಾಗಾಧಿಕಾರಿ ಕಛೇರಿಯವರು ಷೆಡ್ಯೂಲ್ ಆಸ್ತಿಯ ಮೂಲ ಮಾಲೀಕರ ಬಗ್ಗೆ ಪರಿಶೀಲಿಸದೇ ತಪ್ಪಾಗಿ ಆರ್.ಟಿ.ಸಿ ದಾಖಲೆಯಲ್ಲಿ ಶಿವಪ್ಪ ಎಂದು ತಪ್ಪಾಗಿ ನಮೂದಾಗಿರುವುದನ್ನು ತಿಳಿದು ಭೂ ಪರಿಹಾರ ಹಣವನ್ನು ಕೊಡುವ ಸಲುವಾಗಿ ನೋಟಿಸನ್ನು ಕಳುಹಿಸಿರುತ್ತಾರೆ. ಪ್ರತಿವಾದಿಗಳು ದಾವಾ ಆಸ್ತಿಯ ಮಾಲೀಕರೆಂದು ದಾಖಲೆಗಳನ್ನು ಹಾಜರುಪಡಿಸಿದ್ದರಿಂದಾಗಿ ಉಪವಿಭಾಗಾಧಿಕಾರಿಗಳು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕೊಳ್ಳೇಗಾಲಕ್ಕೆ ಮಿಸ್ ಸಂಖ್ಯೆ: 5186/2023 ರಂತೆ ಪ್ರಕರಣ ದಾಖಲಿಸಿಕೊಂಡು, ಭೂ ಸ್ವಾಧೀನದ ಪರಿಹಾರದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿಯಿಟ್ಟಿರುತ್ತಾರೆ. ಸದರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ. ದಾವಾ ಆಸ್ತಿ ವಾದಿಗಳ ತಂದೆಗೆ

ಸಂಬಂಧಪಟ್ಟ ಆಸ್ತಿಯಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ದಾವೆಯನ್ನು/ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿರುತ್ತಾರೆ.

**4.** ಅದರಂತೆ ಮಧ್ಯಂತರ ಅರ್ಜಿಯ ಮೇಲಿನ ಉಭಯತ್ರರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ಅದರಂತೆ ಅರ್ಜಿದಾರರ ಮಧ್ಯಂತರ ಅರ್ಜಿ ಮತ್ತು ಪ್ರತಿವಾದಿಯರ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ಕೂಲಂಕೂಷವಾಗಿ ಪರಿಶೀಲಿಸಿ ನ್ಯಾಯಾಲಯದ ವಿವೇಚನೆಗೆ ಈ ಕೆಳಕಂಡ ಅಂಶಗಳ ಪ್ರಶ್ನೆಗಳು ಉದ್ಭವಾಗಿರುತ್ತದೆ.

***ಅಂಶಗಳು***

1. ***ಅರ್ಜಿದಾರರ ಅರ್ಜಿಯಲ್ಲಿನ ಸಂಭವನೀಯತೆಯ ಒಲವು ವಾದಿಯರ ಪರವಾಗಿರುತ್ತದೆಯೇ?***

2. ***ಅರ್ಜಿಯಲ್ಲಿನ ಸಮತೋಲನತೆಯು ವಾದಿಯರ ಪರವಾಗಿರುತ್ತದೇಯೇ?***

3. ***ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ಹೆಚ್ಚಿನ ಹಾನಿ, ನಷ್ಟ ವಾದಿಯರಿಗೆ ಉಂಟಾಗುವ ಸಂಭವವಿರುತ್ತದೆ?***

4. ***ಯಾವ ಆದೇಶ?***

**6.** ಅರ್ಜಿದಾರರ ಮಧ್ಯಂತರ ಅರ್ಜಿ, ಎದುರುದಾರರ ಲಿಖಿತ ಹೇಳಿಕೆಯ ಅಂಶಗಳು ಹಾಗೂ ಉಭಯತ್ರರರು ಸಲ್ಲಿಸಿರುವ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಯಿತು.

ಅಂಶ 1 ರಿಂದ 3ಃ ನಕಾರಾತ್ಮಕವಾಗಿ

ಅಂಶ 4 ಃ ಈ ಕೆಳಕಂಡ ಕಾರಣಗಳಿಂದಾಗಿ

## ಕಾರಣಗಳು

7. **ಅಂಶ 1 ರಿಂದ 3 ಃ** ಅರ್ಜಿದಾರ/ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆಃ 1ನ್ನು ಸಲ್ಲಿಸಿದ್ದು, ಅದರಲ್ಲಿ ವಾದಿಯರ ಸ್ವಾಧೀನಾನುಭವದಲ್ಲಿರುವ ದಾವಾ ಷೆಡ್ಯೂಲ್ ಸ್ವತ್ತಿಗೆ ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡಿ ತೊಂದರೆಯನ್ನುಂಟು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಕೋರಿರುವುದು ಕಂಡುಬರುತ್ತದೆ. ಪ್ರಸ್ತುತ ದಾವೆಯಲ್ಲಿನ ವಾದಪತ್ರ ಮತ್ತು ವಾದಿಯರ ಪರ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ದಾವಾ ಷೆಡ್ಯೂಲ್ ಸ್ವತ್ತು ಹುಲ್ಲೇಪುರ ಗ್ರಾಮದ ಸರ್ವೆ ನಂ. 118/ಎ1ಬಿ ವಿಸ್ತೀರ್ಣ 1.50 ಸೆಂಟ್ ಮಂಜೂರಾಗಿರುವುದರ ಬಗ್ಗೆ ವಾದಿಯರು ಮತ್ತು ಪ್ರತಿವಾದಿಯ ನಿಲುವನ್ನು ತೆಗೆದುಕೊಂಡಿರುವುದು ನ್ಯಾಯಾಲಯಕ್ಕೆ ಕಂಡುಬರುತ್ತಿರುತ್ತದೆ. ವಾದಿಯರು ದಾವಾ ಆಸ್ತಿ ಶಿವಪ್ಪನವರಿಗೆ ಎಲ್.ಎನ್.ಡಿ. 18/83-84 ರಂತೆ ಮಂಜೂರಾಗಿದ್ದು, ಅದರಂತೆ ಖಾತೆ ಮ್ಯುಟೇಷನ್ ವರ್ಗಾಯಿಸಲ್ಪಟ್ಟು ಅವರ ಮರಣಾನಂತರ ಫವತಿ ಖಾತೆಗೆ ಅರ್ಜಿ ಸಲ್ಲಿಸಿರುವಾಗ್ಗೆ ಪ್ರತಿವಾದಿಗಳು ತಕರಾರನ್ನು ನೀಡಿರುತ್ತಾರೆಂತಲೂ, ಪ್ರತಿವಾದಿಗಳು ದಾವಾ ಆಸ್ತಿ ಎಲ್.ಎನ್.ಡಿ(5) 264/72-73 ರಂತೆ ದಿನಾಂಕಃ 14.02.1971 ರಂದು ವಿ. ನಾರಾಯಣಸ್ವಾಮಿ ಎಂಬುವವರಿಗೆ ಮಂಜೂರಾಗಿದುದ್ದಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ತೊಂದರೆ ನೀಡುತ್ತಿರುತ್ತಾರೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅವುಗಳಲ್ಲಿ ವಂಶವೃಕ್ಷ, 1983-84 ರಿಂದ 2024 ರವರೆಗಿನ ಪಹಣಿ ಪತ್ರಿಕೆಗಳು, ಪಟ್ಟಾ ದಾಖಲೆ ಮರಣ ಪ್ರಮಾಣ ಪತ್ರ, ಭೂಸ್ವಾಧೀನದ ದಾಖಲೆಗಳು, ಮಿಸ್ ಅರ್ಜಿಯ ಕಾಫಿ, ಫೋಟೋ, ಲೋಕಾಯುಕ್ತ ದೂರು, ವಾಸದ ಮನೆಯಿರುವ ಬಗ್ಗೆ ದಾಖಲೆಗಳಾಗಿದ್ದು,ಈ ದಾಖಲೆಗಳಲ್ಲಿ

ವಾದಿಯರು ದಾವಾ ಷೆಡ್ಯೂಲ್ ಸ್ವತ್ತು ಶಿವಪ್ಪನವರಿಗೆ ಎ.ಸಿ.ಎಲ್.ಎನ್.ಡಿಃ 18/83-84 ರಂತೆ ಮಂಜೂರಾದ ಬಗ್ಗೆ ಮಂಜೂರಾತಿಯ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕೇವಲ ಶಿವಪ್ಪನವರ ವಂಶವೃಕ್ಷ, ಮರಣ ಪ್ರಮಾಣ ಪತ್ರ, ಪಟ್ಟಾ ದಾಖಲೆ, ಪಹಣಿ ಪತ್ರಿಕೆಗಳಿಂದಾಗಿ ದಾವಾ ಷೆಡ್ಯೂಲ್ ಸ್ವತ್ತು ಶಿವಪ್ಪನವರಿಗೆ ಮಂಜೂರಾಗಿದ್ದು, ಅದರಂತೆ ವಾದಿಗಳು ಕಾನೂನುಬದ್ಧ ವಾರಸುದಾರರಾಗಿ ಸ್ವಾಧೀನ ಹೊಂದಿರುತ್ತಾರೆಂದು ಪರಿಗಣಿಸಲು ಬರುವುದಿಲ್ಲ.

**8.** ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತು ವಿ. ನಾರಾಯಣಸ್ವಾಮಿ ಎಂಬುವವರಿಗೆ ಅನಧೀಕೃತ ಸಾಗುವಳಿಯನ್ನು ಪರಿಗಣಿಸಿ ಎಲ್.ಎನ್.ಡಿ(5) 264/72-73 ರಂತೆ ಭೂ ನ್ಯಾಯಾ ಮಂಡಳಿ ರಚನೆಯಾದ ನಂತರ ಮಂಜೂರಾಗಿದ್ದು, ಅದರಂತೆ ಎಂ. ಆರ್. 13/84-85 ರಂತೆ ಖಾತೆಯಾಗಿದ್ದು, ವಿ. ನಾರಾಯಣಸ್ವಾಮಿರವರ ಮರಣಾನಂತರ ಅವರ ಮಗ ಎನ್. ಜಯಚಂದ್ರ ಮತ್ತು ಇತರರ ಹೆಸರಿಗೆ ಫವತಿ ಖಾತೆಯಾಗಿದ್ದು, ಸದರಿ ಕುಟುಂಬದವರೆಲ್ಲರೂ ಸೇರಿ 1ನೇ ಪ್ರತಿವಾದಿಯ ತಾಯಿ ಸರೋಜಮ್ಮನವರಿಗೆ ದಿನಾಂಕಃ 01.02.1996 ರಂದು ದಾವಾ ಆಸ್ತಿ ಸರ್ವೆ ನಂ. 118/ಎ1ಬಿ ರಲ್ಲಿ 1.50 ಸೆಂಟ್ ಸರ್ವೆ ನಂ. 119/1 ರಲ್ಲಿ 1.49 ಸೆಂಟ್ ಜಮೀನುಗಳನ್ನು ನೋಂದಣಿ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಈ ಸಂಬಂಧ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಎಲ್.ಎನ್.ಡಿ (5) 264/72-73ರ ಗ್ರಾಂಟ್ ಸರ್ಟಿಪಿಕೇಟ್, ಆರ್.ಆರ್. ಟಿಪ್ಪಣಿ, ನಮೂನೆ 5, ದಿನಾಂಕಃ 01.02.1996ರ ಕ್ರಯಪತ್ರ, ಪಹಣಿ ಪತ್ರಿಕೆ, ಅಧೀಕೃತ ಜ್ಞಾಪನ, ಆಕಾರ್ ಬಂಧ್, ಇ.ಸಿ., ಎಂ.ಆರ್. 16/2013-14, ಪಹಣಿ ಪತ್ರಿಕೆಗಳು, ಭೂ ಸ್ವಾಧೀನ ಸುತ್ತೋಲೆ, ಮಹಜರ್ ದಾಖಲಾತಿಗಳಾಗಿದ್ದು, ಈ ದಾಖಲೆಗಳಿಂದಾಗಿ ದಾವಾ ಷೆಡ್ಯೂಲ್ ಸ್ವತ್ತು ಈ ಹಿಂದೆ ಸರ್ವೆ ನಂ. 118/ಎ1ಎ ಆಗಿದ್ದು ಹಿಸ್ಸಾ ಸರ್ವೆ ಆಗಿ

ಸರ್ವೆ ನಂ. 118/ಎ1ಬಿ ವಿಸ್ತೀರ್ಣ 1.50 ಸೆಂಟ್ ಜಮೀನು ವಿ. ನಾರಾಯಣಸ್ವಾಮಿರವರಿಗೆ ಮಂಜೂರಾತಿಯಾಗಿರುವುದಾಗಿ ಮೇಲ್ನೋಟಕ್ಕೆ ದಾಖಲೆಗಳ ಮೂಲಕ ಬರುತ್ತಿದ್ದು, ಪ್ರತಿವಾದಿಯರು ವಾದಿಯ ತಂದೆ ಶಿವಪ್ಪನವರಿಗೆ ಮಂಜೂರಾದ ಬಗ್ಗೆ ಅಲ್ಲಗಳೆದಿರುವುದರಿಂದ ಹಾಗೂ ವಾದಿಯರ ಸ್ವಾಧೀನವನ್ನು ಸಹ ಅಲ್ಲಗಳೆದಿರುವುದರಿಂದ ವಾದಿಯರು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಹೂಡಿದ್ದಾಗಿದ್ದು, ದಾವೆ ಸರ್ವೆ ನಂಬರ್ ನಲ್ಲಿ ಈಗಾಗಲೇ ಅನ್ಯಕ್ರಾಂತವಾಗಿ ವಿಸ್ತೀರ್ಣ 0.59 ಸೆಂಟ್ ಆಗಿರುವುದಲ್ಲದೇ, ಮಿಸ್ ಅರ್ಜಿಯಲ್ಲಿ ಭೂಸ್ವಾಧೀನವಾಗಿರುವ ದಾವಾ ಆಸ್ತಿಯ ಪರಿಹಾರದ ಹಣ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಠೇವಣೆಯಿಟ್ಟಿರುವುದರಿಂದಾಗಿ ವಾದಿಯರು ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರುವ ಬಗ್ಗೆ ಕೇವಲ ಪಹಣಿ ಪತ್ರಿಕೆಯ ಆಧಾರದ ಮೇಲೆ ನಿರ್ಧರಿಸಲು ಬರುವುದಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಪ್ರತಿವಾದಿಯರು ಹಾಜರುಪಡಿಸಿರುವ ಗ್ರಾಂಟ್ ಸರ್ಟಿಪಿಕೇಟ್ ನಲ್ಲಿ ದಾವಾ ಆಸ್ತಿ ವಿ. ನಾರಾಯಣಸ್ವಾಮಿರವರಿಗೆ ಮಂಜೂರಾಗಿದ್ದು, ಅವರ ಹೆಸರಿಗೆ ಖಾತೆಯಿದ್ದು, ನಂತರದಲ್ಲಿ ವಾರಸುದಾರರಾದ ಎನ್. ಜಯಚಂದ್ರ ಮತ್ತು ಇತರೆ ಕುಟುಂಬದ ಸದಸ್ಯರು 1ನೇ ಪ್ರತಿವಾದಿ ತಾನು ಸರೋಜಮ್ಮನಿಗೆ ದಿನಾಂಕಃ 01.02.1996 ರಲ್ಲಿ ನೋಂದಣಿಕ್ರಯ ಪತ್ರ ಮಾಡಿರುವ ಬಗ್ಗೆ ದಾಖಲೆಗಳಿರುವುದರಿಂದಾಗಿ ಪ್ರಸ್ತುತ ದಾವಾ ಸ್ವತ್ತು 1ನೇ ಪ್ರತಿವಾದಿಯು ತಾಯಿ ಸರೋಜಮ್ಮ ಹಕ್ಕುದಾರಳಾಗಿದ್ದು, ಸ್ವಾಧೀನ ಹೊಂದಿದ್ದು ಆಕೆಯ ವಾರಸುದಾರರಿಗೆ ಫವತಿ ಖಾತೆ ಅವಧಿಯಲ್ಲಿ ಸರ್ವೆ ನಂ. 118/ಎ1ಬಿ ಬದಲಾಗಿ 118/ಎ1ಎ ಎಂದು ಗ್ರಾಮ ಲೆಕ್ಕಿಗರು ನಮೂದಿಸಿರುವುದನ್ನು ಮತ್ತು ಭೂ ಸ್ವಾಧೀನದ ಪರಿಹಾರದ ಹಣಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆ ಆಧಾರದ ಮೇಲೆ ನೀಡಿರುವ ನೋಟಿಸನ್ನು ಆಧರಿಸಿ ವಾದಿಯರು

ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರುತ್ತಾರೆಂದು ಪರಿಗಣಿಸಲು ಬರುವುದಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟು ದಾವಾ ಆಸ್ತಿ ಮಂಜೂರಾತಿ ಬಗ್ಗೆ, ಹಕ್ಕು ನಿರ್ಧಾರದ ಬಗ್ಗೆ, ಸ್ವಾಧೀನದ ಬಗ್ಗೆ ವಿವರಣಾತ್ಮಕ ವಿಚಾರಣೆ ಅತ್ಯಗತ್ಯವೆಂದು ಕಂಡುಬಂದಿದ್ದು, ಈ ಹಂತದಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನು ಮಂಜೂರು ಮಾಡಲು ಅರ್ಜಿಯಲ್ಲಿನ ಸಂಭವನೀಯತೆಯ ಒಲವು ಪ್ರತಿವಾದಿಯರ ಪರವಾಗಿದ್ದು, ಅನುಕೂಲದ ಸಮತೋಲನತೆಯು ದಾಖಲೆಗಳಂತೆ ಪ್ರತಿವಾದಿಯರ ಪರವಾಗಿರುವುದರಿಂದ ಅರ್ಜಿ ಪುರಸ್ಕರಿಸಿದಲ್ಲಿ ಹೆಚ್ಚಿನ ಹಾನಿ ಪ್ರತಿವಾದಿಗಳಿಗೆ ಉಂಟಾಗುವ ಸಾಧ್ಯತೆಗಳಿರುವುದರಿಂದ ಮಧ್ಯಂತರ ಅರ್ಜಿಯನ್ನು ವಜಾಕರಿಸುವುದು ಸೂಕ್ತವೆಂದು ನ್ಯಾಯಾಲಯ ಅಭಿಪ್ರಾಯಪಟ್ಟು **ಅಂಶ 1 ರಿಂದ 3ನ್ನು ನಕಾರಾತ್ಮಕ ಉತ್ತರಿಸಲಾಯಿತು.**

**9. ಅಂಶ 4ಃ** ಮೇಲೆ ಹೇಳಿದ ಕಾರಣಗಳಿಂದಾಗಿ, ಕೆಳಕಂಡಂತೆ.

**ಆದೇಶ**

*ಅರ್ಜಿದಾರ/ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ –1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

**(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 31ನೇ ಜನವರಿ 2025 ರಂದು ಉಚ್ಚರಿಸಲಾಯಿತು)**

**( ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**ಆದೇಶ**

*ಅರ್ಜಿದಾರ/ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ – 1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

**(ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.